## ಮಾಡರ್ನ್ ಮಹಿಳೆ

‘ಮಾಡರ್ನ್ ಮಹಿಳೆ’ (ಸಂಧ್ಯಾರಾಣಿ ಮತ್ತು ಕಾವ್ಯಾ ಕಡಮೆ, ಅ. 28) ಮುಖಪುಟ ಲೇಖನ ಉತ್ತಮವಾಗಿ ಮೂಡಿ ಬಂದಿದೆ. ಹೆಣ್ಣು, ಸಮಾಜದಲ್ಲಿ ಗಂಡಿಗೆ ಸಮನಾಗಿ ಬೆಳೆಯುತ್ತಿರುವಾಗ ಅಲ್ಲಿ ಉಂಟಾಗುವ ಅಂತರವನ್ನು ತುಂಬಿಸಬೇಕಾದವರು ಗಂಡಸರು. ಮುಂದಿನ ಪೀಳಿಗೆಯ ಭವಿಷ್ಯವನ್ನು ರೂಪಿಸುವ ಜವಾಬ್ದಾರಿ ಬರೇ ಹೆತ್ತ ತಾಯಿಯದ್ದು ಮಾತ್ರ ಅಲ್ಲ, ಅದು ತಂದೆ ಹಾಗೂ ಮನೆಯಲ್ಲಿ ಇರುವ ಎಲ್ಲರದೂ ಎಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ಇಂದಿನ ಹೆಣ್ಣಿಗೆ ಸಮಾಜದಲ್ಲಿ ಜವಾಬ್ದಾರಿ ಹೆಚ್ಚುತ್ತಿರುವಾಗ ಗಂಡು ಕೂಡ ಸ್ವಲ್ಪ ಭಾರವನ್ನು ಹಂಚಿಕೊಳ್ಳುವುದು ಅನಿವಾರ್ಯವಾಗಿದೆ.

—ಮಾಧವ ಉದ್ಯಾವರ್, ಮೈಸೂರು

ಸಂಧ್ಯಾರಾಣಿ ಅವರ ‘ಮುಷ್ಟಿಬಿಗಿದು ಮುನ್ನಡೆಯುತ್ತಾ...’ ಲೇಖನ ಚೆನ್ನಾಗಿತ್ತು. ಅದರಲ್ಲಿ ಹೇಳಿರುವ ಪ್ರತಿಯೊಂದು ವಿಷಯ ಬಾಣ ನಾಟಿದಂತಿದೆ. ಕೊನೆಯ ವರ್ಷದ ಬಿಎಸ್‌ಸಿ ವಿದ್ಯಾರ್ಥಿನಿ ಆಗಿರುವ ನನಗೆ ತುಂಬಾ ಹಿಡಿಸಿತು. ನನ್ನ ಆಲೋಚನೆಗಳನ್ನೇ ಓದಿದಂತಾಯಿತು. ಇನ್ನಾದರೂ ಈ ಆಚರಣೆಗಳು ಬದಲಾಗಬೇಕಿದೆ. ಬದಲಾಯಿಸಬೇಕಾದೆ. **Let us begin matriarchy!**

—ರಕ್ಷಿತಾ ಎಂ.ಜಿ.

ಲೇಖನ ಚೆನ್ನಾಗಿದ್ದರೂ ಇದು ವ್ಯವಸ್ಥೆಯ ಒಂದು ಮಗ್ಗುಲನ್ನು ಮಾತ್ರ ತೋರಿಸುತ್ತಿದೆ. ಸಮಾಜದಲ್ಲಿ ಒಳ್ಳೆಯ ಅಪ್ಪ, ಗಂಡ, ಅಣ್ಣ ಇವರೆಲ್ಲ ಇಲ್ಲವೇ? ಯಾವುದೇ ವ್ಯವಸ್ಥೆಯಲ್ಲಿಯೂ ಒಂದಿಷ್ಟು ಕೆಟ್ಟದ್ದು ಇದ್ದೇ ಇರುತ್ತದೆ. ಕೆಟ್ಟದ್ದನ್ನು ಮಾತ್ರ ವೈಭವೀಕರಿಸಿ ವ್ಯವಸ್ಥೆಯನ್ನು ದೂರುವುದರಿಂದ ಯಾವುದೇ ಲಾಭ ಆಗಲಾರದು. ಹೀಗೆ ದೂರಿ ದೂರಿ ನಾವೆಲ್ಲ ಕೂಡು ಕುಟುಂಬ ನಾಶ ಮಾಡಿದ್ದೇವೆ. ಗಂಡ, ಹೆಂಡತಿ, ಮಕ್ಕಳು ಇದೆಲ್ಲ ಸಂಬಂಧಗಳೇ ಬೇಡ.

—ಅರವಿಂದ ಶೇಡಬಾಳ, ಮೈಸೂರು

ಲೇಖನ, ನೈಜವಾಗಿ ಈ ಪುರುಷಪ್ರಧಾನ ಮನಸ್ಥಿತಿಯ ಜನರ ನಡುವೆ ಹೆಣ್ಣು ಅನುಭವಿಸುವ ಕಷ್ಟ, ಕಣ್ಣೀರನ್ನು ಪದರೂಪಕ್ಕೆ ಇಳಿಸಿದಂತಿತ್ತು. ಸಂಧ್ಯಾರಾಣಿ ಅವರ ಲೇಖನ ಒಂದು ಆಯಾಮವನ್ನು ಸಾರಿದರೆ, ಕಾವ್ಯಾ ಕಡಮೆ ಅವರ ಲೇಖನ ಇನ್ನೊಂದು ಆಯಾಮವನ್ನು ತೆರೆದಿಟ್ಟಿದೆ.

—ಶ್ರುತಿ

### ಸ್ತ್ರೀಮತಕುತ್ತರಿಸದ ಗಂಡು

‘ಸ್ತ್ರೀಮತಕುತ್ತರಿಸದ ಎಲ್ಲ ಕಾಲದ ಗಂಡು’ (ರಘುನಾಥ ಚ.ಹ. ಅ. 28) ಲೇಖನವು ಪುರುಷ ಪ್ರಧಾನ ಸಮಾಜದಲ್ಲಿ ನಾಯಕರೆನಿಸಿಕೊಂಡ ರಾಜಕಾರಣಿಗಳ ಮನಸ್ಥಿತಿಯನ್ನು ಚೆನ್ನಾಗಿ ಬಿಂಬಿಸಿದೆ. ಇದನ್ನು ಸರಿಪಡಿಸಬೇಕಾದ ಆಡಳಿತದ ಚುಕ್ಕಾಣಿ ಹಿಡಿದ ಮಂದಿಯನ್ನು ಲೇಖನ ಬೆತ್ತಲಾಗಿಸಿದೆ. ಪತ್ನಿಯಿಂದ ದೂರವಾಗಿರುವ ಪುರುಷ ರಾಜಕಾರಣಿಗಳೂ ನಮ್ಮ ನಡುವೆಯಿದ್ದಾರೆ ಎನ್ನುವುದು ಮಾರ್ಮಿಕವಾಗಿದೆ!

—ಸುರತ್ಕಲ್ ರವಿರಾಜ ಬೈಕಂಪಾಡಿ

‘ನಿಮ್ಮೊಡನೆ’ ಲೇಖನ ಅರ್ಥವತ್ತಾಗಿದೆ. ಕೆಲವು ಸಂಘಟನಾ ನಾಯಕರು ಇದರಿಂದ ಹೊರತಾಗಿಲ್ಲವೆನ್ನುವುದು ಇನ್ನೂ ದೊಡ್ಡ ದುರಂತ!

—ರೇವತಿ ಬಿ.ಎಂ.

### ಕ್ರಿಯೇಟಿವ್ ಕರ್ಣಾಭರಣ

‘ಕ್ರಿಯೇಟಿವ್ ಕರ್ಣಾಭರಣ’ (ಸುಮಾ ರಮೇಶ್, ಅ.28) ಒಂದು ಉತ್ತಮ ಹಾಸ್ಯ ಲೇಖನ. ನನ್ನದೇ ಅನುಭವಗಳನ್ನು ಲೇಖಕಿ ರಸವತ್ತಾಗಿ ಬರೆದಿರುವುದನ್ನು ಓದಿ ಅಚ್ಚರಿಯಾಯಿತು.

—ಸುಜಾತಾ ಪಟ್ಟಾಭಿ

ಲೇಖನ ನಿಜಕ್ಕೂ ಮಂದಹಾಸ ತಂದಿತು. ತಮಗೆ ಬಹುವಾಗಿ ಪ್ರಿಯವಾಗಿದ್ದ ಜುಮುಕಿಗಳಿಗೆ ವಯೋಧರ್ಮಕ್ಕನುಗುಣವಾಗಿ ಲೇಖಕರು ನಿವೃತ್ತಿಯನ್ನು ಘೋಷಿಸಿದ್ದು ಬೇಸರವೆನಿಸಿತು!

—ಪ್ರಭಾ ಪ್ರಸಾದ್

### ಉತ್ತಮ ಕಥೆ

‘ಮೂಕನಾಗಿರಬೇಕು ಈ ಜಗದೊಳು ಜ್ವಾಕ್ಯಾಗಿರಬೇಕು’ (ಕಾ.ತ. ಚಿಕ್ಕಣ್ಣ, ಅ.28) ಕಥೆ ಚೆನ್ನಾಗಿದೆ. ದೈನಂದಿನ ಬದುಕಿನಲ್ಲಿ ನಡೆಯುವ ಸಣ್ಣ ಸಣ್ಣ ಸಂಗತಿಗಳನ್ನು ಗಮನಿಸಿ, ಅನುಭವಿಸಿ ನಿರೂಪಿಸುವ ಅವರ ಶೈಲಿ ತುಂಬಾ ಅದ್ಭುತವಾಗಿದೆ.

—ಜಿ. ಪಾಂಡುರಂಗ, ಕಲಬುರಗಿ

### ರಾವಣನ ಪ್ರಜಾಪ್ರಭುತ್ವ ಮಾದರಿ

‘ಕುವೆಂಪು ಸೃಜಿಸಿದ ರಾವಣ; ಪ್ರಜಾಪ್ರಭುತ್ವದ ಮಾದರಿ’ (ಜಿ. ಕೃಷ್ಣಪ್ಪ, ಅ. 28) ಲೇಖನ ಓದಿದೆ. ಹಿಂದಿನ ಅನೇಕ ರಾಮಾಯಣ ಕಾವ್ಯಗಳಲ್ಲಿ ಕಾಣದ ವಿಶಿಷ್ಟ ದರ್ಶನದೀಪ್ತಿಯನ್ನು ಕುವೆಂಪುರವರು ಹಲವು ಪಾತ್ರಗಳ ಮೂಲಕ ಕಂಡರಿಸಿ ತೋರಿಸಿದ್ದಾರೆ. ಅಂತಹ ದರ್ಶನದೀಪ್ತಿಯ ಬೆಳಕನ್ನು ಈ ಲೇಖನ ಒಳಗೊಂಡಿರುವುದನ್ನು ಕಾಣುತ್ತೇವೆ.

—ಜಿ.ಕೆ. ಕಂಚೀವರದಯ್ಯ, ಕೊಳಪಾಳ

### ನಮ್ಮೂರ ಕೆರೆಯ ಜಲಧರ್ಮ

‘ನಮ್ಮೂರ ಕೆರೆಯ ಜಲಧರ್ಮ’ (ಶಿವಾನಂದ ಕಳವೆ, ಅ.7) ಲೇಖನ ಸಮಗ್ರ ಮಾಹಿತಿಯೊಂದಿಗೆ ಉತ್ತಮವಾಗಿ ಮೂಡಿಬಂದಿದೆ. ಕೆರೆಗಳ ಮಹತ್ವವನ್ನು ತಿಳಿಸಿ ಜಲಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ. ನಮ್ಮ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಹಸ್ರಾರು ಕಾರ್ಯಕರ್ತರು, ಸ್ಥಳೀಯ ನಾಗರಿಕರ ಸಹಕಾರದೊಂದಿಗೆ ಮಾಡಿದ ಅವಿರತ ಪ್ರಯತ್ನ, ಪರಿಶ್ರಮದಿಂದ ಎಲ್ಲೆಡೆ ಈ ಯೋಜನೆ ಯಶಸ್ವಿಯಾಗಿದೆ. ಅಧಿಕೃತ ಅಂಕಿ–ಅಂಶಗಳು ಹಾಗೂ ಮಾಹಿತಿಯನ್ನು ಕಲೆಹಾಕಿ ಲೇಖನ ಬರೆದ ಲೇಖಕರಿಗೂ, ಪ್ರಕಟಿಸಿದ ಸಂಪಾದಕ ಮಂಡಳಿಗೂ ಧನ್ಯವಾದಗಳು.

—ಡಿ. ವೀರೇಂದ್ರ ಹೆಗ್ಗಡೆ, ಧರ್ಮಸ್ಥಳ

### ಶ್ಯಾವಿಗೆ ಸವಿ

‘ಶ್ಯಾವಿಗೆ ಇಲ್ಲಿ ಸವಿಯಲು ಸಿದ್ಧ’ (ಶ್ರೀಪಡ್ರೆ, ಅ.28) ಲೇಖನದಲ್ಲಿ ಕಾಸರಗೋಡಿನ ಜೋಡಿಯ ಶ್ಯಾವಿಗೆ ಉದ್ಯಮದ ಯಶಸ್ಸಿನ ಬಗ್ಗೆ ತಿಳಿಸಿದ್ದಾರೆ. ಗುಣಮಟ್ಟದ ಆಹಾರ ಪದಾರ್ಥಗಳಿಗೆ ಎಂದೆಂದಿಗೂ ಬೇಡಿಕೆ ಇರುತ್ತದೆ ಎಂಬುದಕ್ಕೆ ಮಜಕ್ಕಾರ್ ಮತ್ತು ಶ್ರೀನಿಧಿಯವರ ಯಶೋಗಾಥೆಯೇ ಸಾಕ್ಷಿ.

—ರಾಜೀವ್ ಎನ್. ಮಾಗಲ್, ಹಾಸನ

### ಶಾಪಿಂಗ್ ಪಾಠಗಳು

‘ಎಳೆಯ ಮನಸ್ಸುಗಳಿಗೆ ಶಾಪಿಂಗ್ ಪಾಠಗಳು’ (ಸ್ವಯಂಪ್ರಭಾ, ಅ.28) ಚೆನ್ನಾಗಿದೆ. ನಮ್ಮ ಮನೆ ಮಾಲೀಕರ ಅಳಿಯ ಇನ್ನೂ ನಾಲ್ಕು ವರ್ಷದ ಮಗು. ಹಠ ಮಾಡಬಾರದೆಂದು ಅವನ ಕೈಯಲ್ಲಿ ಯಾವಾಗಲೂ ಮೊಬೈಲ್ ಕೊಟ್ಟಿರುತ್ತಿದ್ದರು. ಒಂದು ದಿನ ಅವನು ಫ್ಲಿಪ್‌ಕಾರ್ಟ್‌ನಿಂದ ಮನೆಯವರಿಗೆ ಗೊತ್ತಿಲ್ಲದಂತೆ ಸುಮಾರು ನಾಲ್ಕು ಸಾವಿರ ಬೆಲೆಯ ಆಟಿಕೆ ಸಾಮಾನುಗಳನ್ನು ಆರ್ಡರ್ ಮಾಡಿದ್ದ. ಮನೆಗೆ ಡೆಲಿವರಿ ಬಾಯ್ ಅಷ್ಟೊಂದು ಆಟಿಕೆ ಸಾಮಾನುಗಳನ್ನು ತಂದದ್ದು ನೋಡಿ ತಬ್ಬಿಬ್ಬಾಗಿದ್ದರು.

—ಮಧುಮತಿ ಅಭಿಷೇಕ್, ಚಿತ್ರದುರ್ಗ

ಆನ್ಲೈನ್ ವ್ಯವಹಾರಗಳು ಹೇಗೆ ನಮ್ಮನ್ನು ಅವುಗಳ ಬಲೆಯಲ್ಲಿ ಸೆಳೆಯುತ್ತವೆ ಎಂದು ಲೇಖಕಿ ಚೆನ್ನಾಗಿ ತಿಳಿಸಿದ್ದಾರೆ. ಆನ್ಲೈನ್‌ನ ಸಾಧಕ, ಬಾಧಕಗಳನ್ನು ಚೆನ್ನಾಗಿ ತಿಳಿದು ವ್ಯವಹರಿಸುವುದು ಲೇಸು.

—ವಿಜಯಾ ಪ್ರಸಾದ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in